**1 ನೇ ಬಂಟ್ವಾಳ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ**

ಸಿಸಿ ನಂ. 1413/2020

ಪ್ರಾ ಸಾ : 18

ಚಾಸಾ : 22

| | | |
|---|---|---|
| ಹೆಸರು | : | ವಿನೋದ್ ಎಸ್ ಕೆ |
| ತಂದೆಯ ಹೆಸರು | : | ಸುರೇಶ್ ಕಾಳಪ್ಪನವರ |
| ಪ್ರಾಯ | : | 35 ವರ್ಷ |
| ಉದ್ಯೋಗ | : | ಪಿ.ಎಸ್.ಐ, ಎಸ್.ಐ.ಟಿ ಧರ್ಮಸ್ಥಳ |
| ವಾಸಸ್ಥಳ | : | ಧರ್ಮಸ್ಥಳ |

ದಿನಾಂಕಃ 06.08.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನಾನು ಫೆಬ್ರವರಿ **2020** ರಿಂದ ಜುಲೈ **2021** ವರೆಗೆ ವಿಟ್ಲ ಪೊಲೀಸು ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕ 21.05.2020 ರಂದು ಚಾಸಾ-21 ರವರಿಂದ ಮುಂದಿನ ತನಿಖೆಗಾಗಿ ಪ್ರಕರಣದ ಕಡತವನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಕಳ್ಳತನ ಮಾಡಿದ ಜಾನುವಾರುಗಳೊಂದಿಗೆ ಆರೋಪಿತರು ಸಾಲೇತ್ತೂರಿನ ದಾರೆಪಡ್ಕೋ ಎಂಬಲ್ಲಿ ಇರುವ ಬಗ್ಗೆ ಮಾಹಿತಿ ಬಂದ ಮೇರೆಗೆ ನಾನು, ಚಾಸಾ-4 ಮತ್ತು ಚಾಸಾ-5 ರವರು ಸದರಿ ಸ್ಥಳಕ್ಕೆ ಹೋಗಲಾಗಿ, ಅದರಲ್ಲಿದ್ದ ಮೂರು ಜನರಲ್ಲಿ ಇಬ್ಬರ ಪರಾರಿಯಾಗಿ ಒಬ್ಬನು ಸಿಕ್ಕಿದ್ದು, ಆತನ ಹೆಸರು ಮತ್ತು ವಿಳಾಸ ಕೇಳಲಾಗಿ ಹ್ಯಾರಿಸ್ ಕಟ್ಟತ್ತಿಲ ಮನೆ, ಕೊಳ್ನಾಡು ಗ್ರಾಮ, ಬಂಟ್ವಾಳ ತಾಲೂಕು ಎಂಬುದಾಗಿ ತಿಳಿಸಿದ್ದು. ನಂತರ ಕೃತ್ಯದ ಬಗ್ಗೆ ವಿಚಾರಿಸಲಾಗಿ ಸದರಿ ಪ್ರಕರಣಕದಲ್ಲಿ

ಕಳುವಾಗಿರುವ ಹಸುವನ್ನು ಓಮಿನಿ KA-19-MF-4896 ನೇದ್ದರಲ್ಲಿ ತಾನು, ಯಾಸೀರ್ ಹಾಗೂ ಬಸೀರ್ ರವರೊಂದಿಗೆ ಕಳ್ಳತನ ಮಾಡಿಕೊಂಡು ಬಂದು ವಾಹನ ಬದಲಾಯಿಸಿ ಪ್ರಸ್ತುಸ ಸ್ಥಳದಲ್ಲಿಇರುವ ಅಶೋಕ್ ಲೇಲ್ಯಾಂಡ್ ಗೂಡ್ಸ್ ವಾಹನದಲ್ಲಿ ತೆಗೆದುಕೊಂಡು 4 ನೇ ಆರೋಪಿಯವರ ಮನೆಯ ಸಮೀಪದ ಕಸಾಯಿ ಕಾನೆಗೆ ತೆಗೆದುಕೊಂಡು ಹೋಗುತ್ತಿರುವುದಾಗಿ 4 ನೇ ಆರೋಪಿಯವರ ಮನೆಯವರೆಗೆ ಗೂಡ್ಸ್ ವಾಹನ ಹೋಗದೆ ಇರುವ ಕಾರಣಕ್ಕೆ ಸಾಲೇತ್ತೂರಿನ ದಾರೆಪಡ್ಡೋ ಕಾಲುದಾರಿಯಲ್ಲಿ ಹಸುವನ್ನು ಇಳಿಸಿ ನಡೆಸಿಕೊಂಡು ಹೋಗಿ ಕಸಾಯಿ ಕಾನೆಗೆ ಹಣಕ್ಕೆ ಮಾರಲು ತೆಗೆದುಕೊಂಡು ಹೋಗುತ್ತಿರುವುದಾಗಿ ತಿಳಿಸಿದ ಮೇರೆಗೆ ಆತನನ್ನು ವಶಕ್ಕೆ ಪಡೆದು ಪಂಚರಾದ ಚಾಸಾ-6 ಮತ್ತು ಚಾಸಾ-7 ರವರುಗಳನ್ನು ಬರುಮಾಡಿಕೊಂಡು, ಘಟನೆಯ ಬಗ್ಗೆ ವಿವರಿಸಿ ಪಂಚರನ್ನಾಗಲು ಸಹಕರಿಸುವಂತೆ ಕೇಳಿಕೊಂಡು ಅವರು ಒಪ್ಪಿದಂತೆ ನೋಟಿಸ್ ನೀಡಿ ತಕ್ಷೀರು ಸ್ಥಳದಲ್ಲಿದ್ದ ಅಶೋಕ್ ಲೇಲ್ಯಾಂಡ್ ಗೂಡ್ಸ್ ವಾಹನ ಸಂಖ್ಯೆ KA-19-AA-6631 ಹಾಗೂ ಹೊಂಡಾ ಆ್ಯಕ್ಟಿವಾ ಸ್ಕೂಟಿ, ಒಂದು ಕತ್ತಿ, ಹಗ್ಗ ಹಾಗೂ ಒಂದು ಕಂದು ಬಣ್ಣದ ಹಸುವನ್ನು ಸ್ವತ್ತು ಸ್ವಾಧೀನತ ಮಹಜರ ಮುಖೇನ ವಶಪಡಿಸಿಕೊಂಡು ಮಾನ್ಯ ನ್ಯಾಯಾಲಯಕ್ಕೆ ಸ್ವತ್ತು ಪಟ್ಟಿ ಸಂಖ್ಯೆ 87/2020 ರಂತೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿಗೆ ಈಗಾಗಲೇ ಗುರುತಿಸಲಾದ ನಿಪಿ-8 ದಾಖಲೆಯನ್ನು ತೋರಿಸಲಾಗಿ, ಸಾಕ್ಷಿಯ ಅದನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು **ನಿಪಿ-8(ಸಿ)** ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಈಗಾಗಲೇ ಮು.ಮಾ-1 ಮತ್ತು ಮು.ಮಾ-7 ಸ್ವತ್ತುಗಳನ್ನು ತೋರಿಸಲಾಗಿ, ಸಾಕ್ಷಿಯ ಅವುಗಳನ್ನು ಮತ್ತು ಅವುಗಳಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಗಳನ್ನು **ಮು.ಮಾ-**

**1(ಎ) ಮತ್ತು ಮು.ಮಾ-7(ಎ)** ಎಂದು ಗುರುತಿಸಲಾಯಿತು. ನಂತರ ಸ್ವತ್ತುಗಳನ್ನು ಮತ್ತು 1 ನೇ ಆರೋಪಿಯನ್ನು ಠಾಣೆಗೆ ಕರೆದುಕೊಂಡು ಬಂದು ಕೂಲಂಕುಷವಾಗಿ ವಿಚಾರಿಸಲಾಗಿ 1 ನೇ ಆರೋಪಿಯು ಕೃತ್ಯದ ಬಗ್ಗೆ ತಪ್ಪೊಪಿಗೆಯ ಹೇಳಿಕೆಯನ್ನು ನೀಡಿ ತಾನು ಉಕ್ಕುಡದ ವತ್ತೆಸಾರ್ ಎಂಬಲ್ಲಿ 2 ಮತ್ತು 3 ನೇ ಆರೋಪಿತರ ಜೊತೆಗೂಡಿ ಕಳ್ಳತನ ಮಾಡಿ 4 ನೇ ಆರೋಪಿಯ ಅಕ್ರಮ ಕಸಾಯಿ ಕಾನೆಗೆ ನೀಡಲು ಹೋಗುತ್ತಿದ್ದು, ಇದೇ ರೀತಿ ನಾನು, 2 ಮತ್ತು 3 ನೇ ಆರೋಪಿತರು ಹಲವು ಬಾರಿ 4 ನೇ ಆರೋಪಿಯ ಅಕ್ರಮ ಕಸಾಯಿ ಕಾನೆಗೆ ಕದ್ದು ತಂದು ಹಸುವನ್ನು ನೀಡಿ ಹಣವನ್ನು ಪಡೆದಿರುತ್ತೇವೆ. 1 ನೇ ಆರೋಪಿಯು ನೀವು ನನ್ನ ಜೊತೆಗೆ ಬಂದರೆ 4 ನೇ ಆರೋಪಿಯ ಅಕ್ರಮ ಕಸಾಯಿ ಕಾನೆಯನ್ನು ತೋರಿಸುತ್ತೇನೆ ಎಂದು ತಿಳಿಸಿದರು. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದು 1 ನೇ ಆರೋಪಿಯು ತನ್ನ ಸ್ವ ಇಚ್ಚಾ ಹೇಳಿಕೆಯಲ್ಲಿ **" ಸದರಿ ಸ್ಥಳವನ್ನು ತಾವು ನನ್ನೊಂದಿಗೆ ಬಂದರೆ ತೋರಿಸಿಕೊಡುತ್ತೇನೆ "** ಎಂದು ಹೇಳಿರುವ ಭಾಗವನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು **ನಿಪಿ-25** ಎಂದು ಗುರುತಿಸಲಾಯಿತು. ನಂತರ ಠಾಣೆಗೆ ಪಂಚರಾದ ಚಾಸಾ-6 ಮತ್ತು ಚಾಸಾ-7 ರವರುಗಳನ್ನು ಬರಮಾಡಿಕೊಂಡು 1 ನೇ ಆರೋಪಿಯು ತಿಳಿಸಿದ ಸಂಗತಿಗಳನ್ನು ತಿಳಿಸಿ 4 ನೇ ಆರೋಪಿಯ ಅಕ್ರಮ ಕಸಾಯಿ ಕಾನೆಗೆ ತೆರಳುತ್ತಿದ್ದು, ಪಂಚರಾಗಿ ಸಹಕರಿಸಲು ಕೋರಿಕೊಂಡತೆ ಅವರುಗಳು ಒಪ್ಪಿದ ಮೇರೆಗೆ ಇಲಾಖಾ ವಾಹನದಲ್ಲಿ 1 ನೇ ಆರೋಪಿಯು ಹೇಳಿ ತೋರಿಸಿದ ಮೇರೆಗೆ ಸಾಲೇತ್ತೂರು ಮಾರ್ಗವಾಗಿ ತಲಕ್ಕಿಯಿಂದ ಮುಂದಕ್ಕೆ 4 ನೇ ಆರೋಪಿಯ ಮನೆಯ ಮುಂದೆ ತೆರೆದ ಶೆಡ್ ಬಳಿ ಹೋಗಿದ್ದು ಅಲ್ಲಿ ಲ ಪಂಚರ ಸಮಕ್ಷಮ ಕೂಲಂಕುಷವಾಗಿ ಪರಿಶೀಲಿಸಲಾಗಿ ಜಾನುವಾರು ಚರ್ಮಗಳು 202, ಜಾನುವಾರು ಮಾಂಸ ತಲಾ 1 ಕೆ.ಜಿಯ ಎರಡು ಪೊಟ್ಟಣಗಳು, ಹಸಿರು ಬಣ್ಣದ ಪ್ಲಾಸ್ಟಿಕ್

ಹಿಡಿಯ ಹನ್ನೆರಡು ಇಂಚಿನ ಉದ್ದದ ಕಬ್ಬಿಣದ ಚೂರಿ ಒಂದು, ಕಬ್ಬಿಣದ ಹಿಡಿಕೆಯ ಹದಿನೈದು ಇಂಚಿನ ಉದ್ದದ ಚೂರಿ ಒಂದು, ಮಾಂಸ ಕಡೆಯುವ ಕಬ್ಬಿಣದ ಚೂರಿ ಒಂದು, ಕತ್ತಿಯನ್ನು ಹರಿತ ಮಾಡುವ ಸಾಧನ ಒಂದು, ಎಲಿಕ್ಟ್ರಿಕ್ ತೂಕ ಮಾಪನ ಒಂದು, ಮಾಂಸ ಕಡೆಯುವ ಮರದ ದಿಂಬಿ ಒಂದು, ಎರಡು ಕೆ.ಜಿ ಮಾಂಸ ತುಂಬುವ ಪ್ಲಾಸ್ಟಿಕ್ ಕವರುಗಳು, ಏಳು ಜೀವಂತ ದನಗಳು, ಆಟೋ ರೀಕ್ಷಾ ಒಂದು, ಹೀರೋ ಮ್ಯಾಸ್ಟ್ರೋ ಮೊಟಾರ್ ಸೈಕಲ್ ಒಂದು, ಹೀರೋ ಸ್ಪ್ಲೆಂಡರ್ ಮೊಟಾರ್ ಸೈಕಲ್ ಒಂದು, ಹೊಂಡಾ ಡಿಯೋ ಸ್ಕೂಟಿ ಒಂದು ಸಿಕ್ಕಿದ್ದು ಅವುಗಳನ್ನು ಪಂಚರ ಸಮಕ್ಷಮ ಸ್ವತ್ತು ಸ್ವಾಧೀನತ ಮಹಜರ ಮುಖೇನ ವಶಪಡಿಸಿಕೊಂಡು ಮಾನ್ಯ ನ್ಯಾಯಾಲಯಕ್ಕೆ ಸ್ವತ್ತು ಪಟ್ಟಿ ಸಂಖ್ಯೆ 88/2020 ರಂತೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿಗೆ ಈಗಾಗಲೇ ನಿಪಿ-9 ಎಂದು ಗುರುತಿಸಲಾದ ದಾಖಲೆಯನ್ನು ತೋರಿಸಲಾಗಿ, ಸಾಕ್ಷಿಯು ಅದನ್ನು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು **ನಿಪಿ-9(ಸಿ)** ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಈಗಾಗಲೇ ಮು.ಮಾ-2 ರಿಂದ ಮು.ಮಾ-6 ಸ್ವತ್ತುಗಳನ್ನು ತೋರಿಸಲಾಗಿ, ಸಾಕ್ಷಿಯ ಅವುಗಳನ್ನು ಮತ್ತು ಅವುಗಳಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಗಳನ್ನು ಕ್ರಮವಾಗಿ **ಮು.ಮಾ-2(ಎ) ರಿಂದ ಮು.ಮಾ-6(ಎ)** ಎಂದು ಗುರುತಿಸಲಾಯಿತು.

3. ನಂತರ ಪಂಚನಾಮೆ ಕಾಲಕ್ಕೆ ಪೋಟೋಗಳನ್ನು ತೆಗೆಯಲಾಯಿತು. ಸಾಕ್ಷಿಗೆ ಈಗಾಗಲೇ ಗುರುತಿಸಲಾದ ನಿಪಿ-22 ಮತ್ತು ನಿಪಿ-23 ಗಳಲ್ಲಿರುವ ಪೋಟೋಗಳನ್ನು

ತೋರಿಸಲಾಗಿ, ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿರುತ್ತಾರೆ. 1 ನೇ ಆರೋಪಿಯನ್ನು ಠಾಣೆಗೆ ಕರೆದುಕೊಂಡು ಬಂದು ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶವನ್ನು ಪಾಲಿಸಿ ದಸ್ತಗಿರಿಯನ್ನು ಮಾಡಿ ಕೊವೀಡ್-19 ವರದಿ ಬರುವವರೆಗೂ ಠಾಣೆಯಲ್ಲಿ ಇಟ್ಟಿರುತ್ತೇನೆ. ಅದೇ ದಿನ ಚಾಸಾ-1 ರವರ ಮರು ಹೇಳಿಕೆಯನ್ನು ನಿಪಿ-5 ರಂತೆ ದಾಖಲೆಸಿಕೊಂಡಿದ್ದು, ಚಾಸಾ-2 ರವರ ಹೇಳಿಕೆಯನ್ನು ನಿಪಿ-6 ರಂತೆ, ಚಾಸಾ-3 ರವರ ಹೇಳಿಕೆಯನ್ನು ನಿಪಿ-7 ರಂತೆ, ಚಾಸಾ-6 ರವರ ಹೇಳಿಕೆಯನ್ನು ನಿಪಿ-10 ರಂತೆ, ಚಾಸಾ-7 ರವರ ಹೇಳಿಕೆಯನ್ನು ನಿಪಿ-11 ರಂತೆ ಚಾಸಾ-4 ಮತ್ತು ಚಾಸ-5 ರವರ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ. ಅದೇ ದಿನ ಮಾನ್ಯ ನ್ಯಾಯಾಲಯದಲ್ಲಿ ಕೌ ಸ್ಲಾಟರ್ ಕಾಯ್ದೆ ಅಡಿಯಲ್ಲಿ ತನಿಖೆಯನ್ನು ನಡಸೆಲು ಅನುಮತಿಯನ್ನು ನೀಡುವಂತೆ ಕೋರಿಕೆ ಪತ್ರವನ್ನು ಸಲ್ಲಿಸಿರುತ್ತೇನೆ. ಅದೇ ಚಾಸಾ-20 ರವರಲ್ಲಿ ವಶಪಡಿಸಿಕೊಂಡು ದನಗಳ ಕುರಿತು, ಮಾಂಸ ಮತ್ತು ದನದ ಚರ್ಮದ ಬಗ್ಗೆ ಮಾಹಿತಿಯನ್ನು ನೀಡುವಂತೆ ದೃಡ ಪತ್ರವನ್ನು ಕೋರಿಕೊಂಡಿರುತ್ತೇನೆ.

4. ದಿನಾಂಕ 22.05.2020 ರಂದು 1 ನೇ ಆರೋಪಿಯು ಕೊವೀಡ್-19 ಪರೀಕ್ಷೆಯು ನೆಗೆಟಿವ್ ಬಂದ ಮೇರೆಗೆ ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಚಾಸಾ-20 ರವರು ದನಗಳ ಕುರಿತು ಪರಿಶೀಲನೆ ಮಾಡಿದ ಬಗ್ಗೆ ನೀಡಿದ ದೃಡ ಪತ್ರವನ್ನು ಕಡತಕ್ಕೆ ಅಳವಸಿಕೊಂಡಿರುತ್ತೇನೆ. ಸಾಕ್ಷಿಗೆ ಈಗಾಗಲೇ ನಿಪಿ-17 ಎಂದು ಗುರುತಿಸಲಾದ ದಾಖಲೆಯನ್ನು ತೋರಿಸಲಾಗಿ, ಸಾಕ್ಷಿಯು ಅದನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು **ನಿಪಿ-17(ಬಿ)** ಎಂದು ಗುರುತಿಸಲಾಯಿತು. ಅದೇ ದಿನ ವಶಪಡಿಸಿಕೊಂಡ 202 ಜಾನುವಾರು ಚರ್ಮಗಳಲ್ಲಿ 100 ಚರ್ಮಗಳನ್ನು ಮಾತ್ರ

ಠಾಣೆಗೆ ತರಲಾಗಿದ್ದು ಅವುಗಳನ್ನು ಪಂಚರಾದ ಚಾಸಾ-10 ಮತ್ತು ಚಾಸಾ-11 ರವರ ಸಮಕ್ಷಮ ಠಾಣಾ ಆವರಣದಲ್ಲಿಯೇ ಮಾನ್ಯ ನ್ಯಾಯಾಲಯದ ಅನುಮತಿಯಂತೆ ನಾಶಪಡಿಸಲಾಯಿತು. ಸಾಕ್ಷಿಗೆ ಈಗಾಗಲೇ ನಿಪಿ-13 ಎಂದು ಗುರುತಿಸಲಾದ ದಾಖಲೆಯನ್ನು ತೋರಿಸಲಾಗಿ, ಸಾಕ್ಷಿಯು ಅದನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು **ನಿಪಿ-13(ಸಿ)** ಎಂದು ಗುರುತಿಸಲಾಯಿತು. ಅದೇ ದಿನ 4 ನೇ ಆರೋಪಿಯ ಮನೆಯ ಪಕ್ಕದಲ್ಲಿರುವ ಅಕ್ರಮ ಕಸಾಯಿ ಕಾನೆಯಲ್ಲಿ ಬಿಟ್ಟು ಬಂದಂತಹ 102 ಜಾನುವಾರು ಚರ್ಮಗಳನ್ನು ಚಾಸಾ-10 ಮತ್ತು ಚಾಸಾ-11 ರವರುಗಳ ಸಮಕ್ಷಮ ಪಂಚನಾಮೆ ಮುಖಾಂತರ ನಾಶಪಡಿಸಲಾಯಿತು. ಸಾಕ್ಷಿಗೆ ಈಗಾಗಲೇ ನಿಪಿ-12 ಎಂದು ಗುರುತಿಸಲಾದ ದಾಖಲೆಯನ್ನು ತೋರಿಸಲಾಗಿ, ಸಾಕ್ಷಿಯು ಅದನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು **ನಿಪಿ-12(ಸಿ)** ಎಂದು ಗುರುತಿಸಲಾಯಿತು.

5. ದಿನಾಂಕ 23.05.2020 ರಂದು 2 ನೇ ಆರೋಪಿಯು ಸಾಲೇತ್ತೂರು ಜಂಕ್ಷನಲ್ಲಿ ಸಿಕ್ಕಿದ್ದು ಆತನನ್ನು ಠಾಣೆಗೆ ಕರೆದುಕೊಂಡು ಬಂದು ವಿಚಾರಿಸಲಾಗಿ 2 ನೇ ಆರೋಪಿಯು ಕೃತ್ಯದ ಬಗ್ಗೆ ತಪ್ಪೊಪ್ಪಿಗೆಯನ್ನು ನೀಡಿದನು. ನಂತರ ದಸ್ತಗಿರಿಯ ನಿಯಮಗಳನ್ನು ಪಾಲಿಸಿ ಆತನನ್ನು ಠಾಣಾ ಭದ್ರಿಕೆಯಲ್ಲಿ ಇಟ್ಟುಕೊಂಡಿರುತ್ತೇನೆ. ಅದೇ ದಿನ ಮಾನ್ಯ ನ್ಯಾಯಾಲಯದ ಅನುಮತಿಯಂತೆ ಚಾಸಾ-17 ರವರಿಗೆ 7 ದನಗಳನ್ನು ಹಸ್ತಾಂತರಿಸಿರುತ್ತೇನೆ.

6. ದಿನಾಂಕ 24.05.2020 ರಂದು 2 ನೇ ಆರೋಪಿಯನ್ನು ವೈದ್ಯಕೀಯ ತಪಾಸಣೆ ನಡೆಸಿ ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿ ಕೋವಿಡ್-19 ಪರೀಕ್ಷೆಯ ವರದಿ ಬರುವವರೆಗೆ ಪೊಲೀಸ್ ಕಸ್ಟಡಿಗೆ ನೀಡುವಂತೆ ಕೇಳಿಲಾಗಿ ಮಾನ್ಯ ನ್ಯಾಯಾಲಯವು ಅನುಮತಿಸಿದ್ದು, ಠಾಣಾ ಭದ್ರತೆಯಲ್ಲಿ 2 ನೇ ಆರೋಪಿಯನ್ನು ಇಟ್ಟಿರುತ್ತೇನೆ.

7. 1 ನೇ ಆರೋಪಿತನು ಜಾನುವಾರು ಕಳ್ಳತನಕ್ಕೆ ಬಳಸಿದ್ದ ಓಮಿನಿ ಕಾರ ನಂಬರ್ KA-19-MF-4896 ಎಂಬುದಾಗಿ ತಿಳಿಸಿದ್ದ ಮೇರೆಗೆ ಸದರಿ ವಾಹನವನ್ನು ಪಂಚರಾದ ಚಾಸಾ-12 ಮತ್ತು ಚಾಸಾ-13 ರವರ ಸಮಕ್ಷಮ ಸಾಲೇತ್ತೂರಿನ ಕಟ್ಟತ್ತಿಲ ಎಂಬಲ್ಲಿಯ ಬಸೀರ್ ಎಂಬುವರ ಮನೆಯ ಮುಂದೆ ಮಹಜರ ಮುಖೇನ ವಶಪಡಿಸಿಕೊಂಡಿರುತ್ತೇನೆ. ಸದರಿ ಸ್ವತ್ತನ್ನು ಸ್ವತ್ತು ಪಟ್ಟಿ ಸಂಖ್ಯೆ 116/2020 ರಂತೆ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿಗೆ ಈಗಾಗಲೇ ನಿಪಿ-14 ಎಂದು ಗುರುತಿಸಲಾದ ದಾಖಲೆಯನ್ನು ತೋರಿಸಲಾಗಿ, ಸಾಕ್ಷಿಯು ಅದನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು **ನಿಪಿ-14(ಬಿ)** ಎಂದು ಗುರುತಿಸಲಾಯಿತು.

8. ದಿನಾಂಕ 28.05.2020 ರಂದು 2 ನೇ ಆರೋಪಿಯ ಕೊವೀಡ್-19 ವರದಿ ನೆಗೆಟಿವ್ ಬಂದ ಮೇರೆಗೆ ಆತನನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಿನಾಂಕ 06.06.2020 ರಂದು ಚಾಸಾ-20 ರವರು ವಶಪಡಿಸಿಕೊಂಡ ಮಾಂಸ ಮತ್ತು ಚರ್ಮದ ಬಗ್ಗೆ ನೀಡಿದ ದೃಡಿಕರಣ ಪತ್ರವನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿಗೆ ಈಗಾಗಲೇ ನಿಪಿ-18 ಎಂದು ಗುರುತಿಸಲಾದ ದಾಖಲೆಯನ್ನು ತೋರಿಸಲಾಗಿ,

ಸಾಕ್ಷಿಯು ಅದನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು **ನಿಪಿ-18(ಬಿ)** ಎಂದು ಗುರುತಿಸಲಾಯಿತು.

9. ದಿನಾಂಕ 07.08.2020 ರಂದು ಠಾಣೆಯಲ್ಲಿದ್ದ ಕಂದು ಬಣ್ಣದ ಹಸುವನ್ನು ಚಾಸಾ-1 ರವರಿಗೆ ಚಾಸಾ-14 ಮತ್ತು ಚಾಸಾ-15 ರವರ ಸಮಕ್ಷಮ ಮಾನ್ಯ ನ್ಯಾಯಾಲಯದ ಆದೇಶದಂತೆ ಪಂಚನಾಮೆಯ ಮೂಲಕ ಬಿಡುಗಡೆಗೊಳಿಳಲಾಯಿತು. ಸಾಕ್ಷಿಗೆ ಈಗಾಗಲೇ ನಿಪಿ-4 ಎಂದು ಗುರುತಿಸಲಾದ ದಾಖಲೆಯನ್ನು ತೋರಿಸಲಾಗಿ, ಸಾಕ್ಷಿಯು ಅದನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು **ನಿಪಿ-4(ಡಿ)** ಎಂದು ಗುರುತಿಸಲಾಯಿತು.

10. ದಿನಾಂಕ 11.08.2020 ರಂದು ಜಾನುವಾರು ಕಳ್ಳತನದದ ಪ್ರದೇಶವಾದ ಉಕ್ಕುಡದ ವತ್ತೆಸಾರಿನ ಚಾಸಾ-1 ರವರ ಕೊಟ್ಟಿಗೆಯ ದಾಖಲಾತಿಯನ್ನು ಚಾಸಾ-18 ರವರು ಮೌಖಿಕವಾಗಿ ಕೋರಿಕೊಂಡಿದ್ದನ್ನು ನೀಡಿದ್ದು, ಅದನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿಗೆ ಈಗಾಗಲೇ ನಿಪಿ-15 ಎಂದು ಗುರುತಿಸಲಾದ ದಾಖಲೆಯನ್ನು ತೋರಿಸಲಾಗಿ, ಸಾಕ್ಷಿಯು ಅದನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು **ನಿಪಿ-15(ಬಿ)** ಎಂದು ಗುರುತಿಸಲಾಯಿತು.

11. ದಿನಾಂಕ 13.08.2020 ರಂದು ಅನಧಿಕೃತ ಕಸಾಯಿ ಕಾನೆಯನ್ನು ನಡೆಸುತ್ತಿದ್ದ ಸಾಲೇತ್ತೂರಿನ 4 ನೇ ಆರೋಪಿಯ ಮನೆಯ ಪಕ್ಕದ ತೆರೆದ ಶೆಡ್ಡಿನ ದಾಖಲಾತಿಗಳನ್ನು

ಚಾಸಾ-19 ರವರು ಮೌಖಿಕವಾಗಿ ಕೋರಿಕೊಂಡಿದ್ದನ್ನು ನೀಡಿದ್ದು, ಅದನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿಗೆ ಈಗಾಗಲೇ ನಿಪಿ-16 ಎಂದು ಗುರುತಿಸಲಾದ ದಾಖಲೆಯನ್ನು ತೋರಿಸಲಾಗಿ, ಸಾಕ್ಷಿಯು ಅದನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು **ನಿಪಿ-16(ಬಿ)** ಎಂದು ಗುರುತಿಸಲಾಯಿತು.

12. ದಿನಾಂಕ 18.08.2020 ರಂದು ಆರೋಪಿತರ ವಿರುದ್ಧ ಸಾಕಾಷ್ಟು ಸಾಕ್ಷ್ಯದಾರಗಳು ಲಭ್ಯವಿದ್ದ ಕಾರಣ ಮತ್ತು 1 ಮತ್ತು 2 ನೇ ಆರೋಪಿತರು ನ್ಯಾಯಾಂಗದ ಬಂಧನದಲ್ಲಿ ಇರುವ ಕಾರಣಕ್ಕಾಗಿ ಹಾಗೂ 3 ನೇ ಆರೋಪಿಯು ಪರಾರಿಯಾಗಿದ್ದ ಕಾರಣ 3 ನೇ ಆರೋಪಿಯ ವಿರುದ್ಧ ಸಮನ್ಸ್ ಜಾರಿಗೊಳಿಸುವಂತೆ ಕೋರಿ ಆರೋಪಿತರ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

**ಪಾಟೀ ಸವಾಲುಃ 1 ರಿಂದ 3 ನೇ ಆರೋಪಿ ಪರಃ ಶ್ರೀ ಟಿ ಆರ್ ವಕೀಲರಿಂದಃ**

13. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ದಿನಾಂಕ, ಸ್ಥಳದಲ್ಲಿ 1 ನೇ ಆರೋಪಿಯನ್ನು ದಸ್ತಗಿರಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ತಕ್ಷೀರಿಗೂ ಮತ್ತು ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಸದರಿ ಪ್ರಕರಣವನ್ನು ಸರಿಯಾಗಿ ತನಿಖೆ ಮಾಡದೇ ಆರೋಪಿತರ ವಿರುದ್ಧ ಸುಳ್ಳು ದೋಷಾರೋಪಣಾ ಪಟ್ಟಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಈ ಪ್ರಕರಣದ ಸಾಕ್ಷಿದಾರರು ಯಾವುದೇ ಹೇಳಿಕೆಗಳನ್ನು ನನ್ನ ಮುಂದೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ಮುದ್ದೆ ಮಾಲುಗಳನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಸದರಿ ಪ್ರಕರಣದ ಮುದ್ದೆ ಮಾಲಿಗೂ ಹಾಗೂ ಆರೋಪಿತಿರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ನನ್ನ ಸಮಕ್ಷಮ ಯಾವುದೇ ಮಹಜರನ್ನು ತಯಾರಿಸಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದ ಮಹಜರಿಗೆ ಮತ್ತು ದಾಖಲಾತಿಗಳಿಗೆ ಸಾಕ್ಷಿಗಳನ್ನು ಠಾಣೆಗೆ ಕರೆಸಿ ಸಹಿ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಸುಳ್ಳು ಪ್ರಕರಣಕ್ಕೆ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

ನನ್ನ ಉಕ್ತಲೇಖನಾ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಲಾಗಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ,
ಬಂಟ್ವಾಳ